ಮಾಡುತ್ತೇವೆ. ಅನೇಕ ಸಲ ಸಾಕಷ್ಟು ಮಳೆ ಬಂದರೂ ಕೂಡ, ಅದು ಸರಿಯಾದ ಸಮಯದಲ್ಲಿ ಬಾರದಿದ್ದರೆ ರೈತರ ಕೈಗೆ ಫಸಲು ಬರುವುದಿಲ್ಲ. ನಿಯಮಕ್ಕೆ ಸರಿಯಾಗಿ ಶೇಕಡಾ ೭೫ಕ್ಕಿಂತ ಕಡಿಮೆ ಬೆಳೆ ಇದ್ದು ಕಂದಾಯವನ್ನು ಮನ್ನಾ ಮಾಡುವ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ೨೬ ಗ್ರಾಮಗಳಲ್ಲಿ ಅಣೆವಾರಿ ೨೫ ರಿಂದ ೩೭ ಮತ್ತು ೩೮ ರಿಂದ ೫೦ ಇದ್ದು, ಇಂತಹ ಗ್ರಾಮಗಳಲ್ಲಿ ಕ್ರಮವಾಗಿ ಪೂರ್ತಿ ಕಂದಾಯ ಮುಂದೂಡುವಿಕೆ ಮತ್ತು ಅರ್ಧ ಅಮಾನತ್ತು ಇಡುವ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಐ. ಬಿ. ಶಂಕರ್.—ಈ ಬಗ್ಗೆ ತೀರ್ಮಾನ ಮಾಡುವಾಗ ಮಳೆ ಇಧಾರದ ಮೇಲೆ ಮಾಡುತ್ತೀರಾ ಅಥವಾ ರಿಪೋರ್ಟ್ ಆಧಾರದ ಮೇಲೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡೂ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುತ್ತೇವೆ.

ಸುಳ್ಯ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಒದಗಿಸಲಾದ ಸಾಲಗಳು

೨೪೩. ಶ್ರೀ ಕೆ. ಕುಶಾಲ (ಸುಳ್ಯ),— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕಿನ ಸಹಕಾರಿ ಪ್ರಾಥಮಿಕ ಗ್ರಾಮೀಣ ಭೂ ಅಭಿವೃದ್ಧಿ ಬ್ಯಾಂಕಿನವರು ೧೯೬೧ರಿಂದ ೧೯೬೩ರವರೆಗೆ ಸಾಲ ನೀಡಿದ ಹಿಂದುಳಿದ ವರ್ಗದವರ ಸಂಖ್ಯೆ ಎಷ್ಟು ? ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟೆಷ್ಟು ? (ಪ್ರತ್ಯೇಕ ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಸದರಿ ಬ್ಯಾಂಕಿನವರು ಸಾಲ ನೀಡಿದ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟೆಷ್ಟು ? (ವರ್ಷವಾರು ವಿವರ ನೀಡುವುದು)

ಇ) ಈ ಬ್ಯಾಂಕಿನಲ್ಲಿ ಸಾಲಕ್ಕಾಗಿ ಸಲ್ಲಿಸಿದ ಅರ್ಜಿಗಳೆಷ್ಟು ? ಪಾಲು ಬಂಡವಾಳ ವಸೂಲಾದ ಮತ್ತು ಪಾಲು ಬಂಡವಾಳ ವಸೂಲಾಗಿಯೂ ಸಾಲ ನೀಡದ ಪ್ರಕರಣಗಳೆಷ್ಟು ? ಸಾಲ ನೀಡದಿರಲು ಕಾರಣವೇನು ?

ಶ್ರೀ ಹೆಚ್. ವಿಕಾಂತಯ್ಯ (ಸಹಕಾರ ಸಚಿವರು).—

ಅ) ೧೯೬೦–೬೧ರಿಂದ ೧೯೬೨–೬೩ರವರೆಗೆ ಸುಳ್ಯ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ೭೭೦ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ೪೬ ಪರಿಶಿಷ್ಟ ಜಾತಿ ಮತ್ತು ೪೮ ಪರಿಶಿಷ್ಟ ಪಂಗಡದ ಸದಸ್ಯರಿಗೆ ಸಾಲ ನೀಡಲಾಗಿದೆ. ಕೃಷಿ ಕಾರ್ಮಿಕರಿಗೆ ಯಾವ ಸಾಲವನ್ನೂ ಬ್ಯಾಂಕು ನೀಡಿರುವುದಿಲ್ಲ.

ಆ) ಕಳೆದ ಮೂರು ವರ್ಷಗಳಲ್ಲಿ ಸದರಿ ಬ್ಯಾಂಕಿನವರು ಸಾಲ ನೀಡಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಖ್ಯೆ ಈ ಕೆಳಗಿನಂತಿದೆ.—

ವರ್ಷ	ಸಣ್ಣ ರೈತ ಅತಿ ಸಣ್ಣ ರೈತ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
೧೯೬೪-೬೫	೧೨೩	೧೬	೧೨
೧೯೬೫-೬೬	೧೨೮	೧೧	೬
೧೯೬೬–೬೭	೧೨೦	೩೨	೧೦
ಒಟ್ಟು	೪೩೦	೫೯	೨೮

೫) ೧೯೮೦–೮೧ನೇ ಸಾಲಿನಿಂದ ೧೯೮೭–೮೮ನೇ ಸಾಲಿನವರೆಗೆ (೩೦–೪–೧೯೮೮ರವರೆಗೆ) ೩೦೮೮ ಸಾಲದ ಅರ್ಜಿಗಳು ಬ್ಯಾಂಕಿಗೆ ಬಂದಿರುತ್ತವೆ. ಈ ಅವಧಿಯಲ್ಲಿ ೧೮೭೧ ಹೊಸ ಸದಸ್ಯರಿಂದ ಪಾಲು ಬಂಡವಾಳ ವಸೂಲಾಗಿರುತ್ತದೆ. ಪಾಲು ಬಂಡವಾಳ ವಸೂಲಾಗಿಯೂ ಸಾಲ ನೀಡದ ೩೪ ಸಾಲದ ಅರ್ಜಿಗಳು ಬ್ಯಾಂಕಿನಲ್ಲಿ ವಿಲೇವಾರಿಯಾಗದೇ ಬಾಕಿ ಇವೆ. ಇದರಲ್ಲಿ ೧೧೪ ಅರ್ಜಿಗಳು ಮಂಜೂರಾತಿ ಹಂತದಲ್ಲಿದ್ದು, ೨೦ ಅರ್ಜಿಗಳು ಸಾಲದ ದಾಖಲಾತಿಗಳು ಬಾರದಿರುವುದರಿಂದ, ತಾಂತ್ರಿಕ ವರದಿ ಬಾರದೆ ಇರುವುದು ಮುಂತಾದ ಅನೇಕ ಕಾರಣಗಳಿಂದ ವಿಲೇವಾರಿಯಾಗದೇ ಬಾಕಿ ಇರುತ್ತವೆ.

ಶ್ರೀ ಕೆ. ಕುಶಾಲ.— ಸಚಿವರು ಕೊಟ್ಟಿರುವ ಉತ್ತರದಂತೆ ೩೦೮೮ ಸಾಲದ ಅರ್ಜಿಗಳು ಬಂದಿದ್ದರೂ ಅವಕ್ಕೆ ಏಕೆ ಸಾಲ ಮಂಜೂರು ಮಾಡಲಿಲ್ಲ. ಹೊಸ ಸದಸ್ಯರಿಂದ ಪಾಲು ಬಂಡವಾಳವೂ ವಸೂಲಾಗಿದೆ. ಆದರೆ ಹೊಸ ಅರ್ಜಿದಾರರಿಗೆ ಮಾತ್ರ ಸಾಲ ನೀಡುವಲ್ಲಿ ಪರಿಗಣನೆ ಮಾಡುತ್ತಿದ್ದೀರಿ. ೩೪ ಸಾಲದ ಅರ್ಜಿಗಳು ವಿಲೇವಾರಿಯಾಗದೆ ಉಳಿಯಲು ಕಾರಣಗಳೇನು ? ಸಾಲಕ್ಕಾಗಿ ಬಹಳ ದಿವಸದಿಂದಲೂ ಅರ್ಜಿದಾರರು ಕಾದಿದ್ದಾರೆ. ಆಮೇಲೆ ನಮ್ಮ ಸುಳ್ಯ ಸಹಕಾರ ಪ್ರಾಥಮಿಕ ಬ್ಯಾಂಕ್ ಅಧ್ಯಕ್ಷರು ೨೦ ವರ್ಷಗಳಿಂದಲೂ ಅಲ್ಲೇ ಇದ್ದಾರೆ. ನಿಮ್ಮ ಕಾನೂನಿನಂತೆ ೫ ವರ್ಷಕ್ಕೆ ಮೇಲ್ಪಟ್ಟು ಇರುವಂತಿಲ್ಲ.

ಶ್ರೀ ಎಚ್. ಏಕಾಂತಯ್ಯ.— ೨೦ ವರ್ಷದಿಂದ ಇದ್ದಾರೆಂದು ಹೇಳುವುದು ನಿಜವಲ್ಲದಿರಬಹುದು. ಆದರೂ ಆರೋಪವನ್ನು ಪರಿಶೀಲನೆ ಮಾಡುತ್ತೇನೆ. ಇನ್ನು ೧೯೮೦–೮೧ರಿಂದ ೮೭–೮೮ರವರೆಗಿನ ಅವಧಿಯಲ್ಲಿ ಬಂದ ಅರ್ಜಿಗಳು ೩೦೮, ಅದರಲ್ಲಿ ೩೭೩ ಅರ್ಜಿಗಳು ತಿರಸ್ಕೃತವಾಗಿವೆ, ಕೇವಲ ೩೪ ಅರ್ಜಿಗಳು ಮಾತ್ರ ಉಳಿದಿವೆ. ಅದರಲ್ಲಿ ೧೪ ಮಂಜೂರಾತಿ ಹಂತದಲ್ಲಿದ್ದು ಇನ್ನುಳಿದ ೨೦ ಅರ್ಜಿಗಳು ಅಪೇಕ್ಷಿತ ಕಾಗದ ಪತ್ರಗಳನ್ನು ಪೂರೈಸದಿರುವುದರಿಂದ ಸ್ಥಗಿತವಾಗಿವೆ. ಅವು ಪೂರೈಕೆಯಾದ ಮೇಲೆ ಪರಿಗಣಿಸಲಾಗುವುದು.

ಶ್ರೀ ಕೆ.ಕುಶಾಲ: — ಎಲ್ಲ ದಾಖಲಾತಿಗಳನ್ನು ಕೊಟ್ಟ ಮೇಲೂ ಕೆಲವು ಅರ್ಜಿಗಳು ಹಾಗೇ ಉಳಿದಿವೆ. ಇವನ್ನು ಬೇಗ ಮುಗಿಸಬೇಕು.

ಹೈದರಾಬಾದ್–ಕರ್ನಾಟಕ ಪ್ರದೇಶದ ಅಭಿವೃದ್ಧಿ

೨೬೧೦. ಶ್ರೀ ವಿಶ್ವನಾಥ್‌ಪಾಟೀಲ್ ಹೆಬ್ಬಾಳ (ಚಿತ್ತಾಪುರ).— ಮಾನ್ಯ ಕಂದಾಯ ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೈದರಾಬಾದ್ ಕರ್ನಾಟಕ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗಾಗಿ ವಿಶೇಷ ಮಂಡಳಿ ರಚಿಸುವಂತೆ ಕೇಳಿದ ಪ್ರಶ್ನೆ ಉತ್ತರಿಸುವಾಗ ತಾವು ಸಂಬಂಧಪಟ್ಟ ಎಲ್ಲಾ ಶಾಸಕರೊಂದಿಗೆ ಚರ್ಚಿಸುವುದಾಗಿ ಆಶ್ವಾಸಿದ್ದು ನೆನಪಿದೆಯೇ ?

ಆ) ಇಲ್ಲಿಯವರೆಗೆ ಈ ಕುರಿತು ಯಾವ ಸಭೆಯಾಗಿಲ್ಲ ಹಾಗೂ ತಾವು ನಮ್ಮೊಂದಿಗೆ ಯಾವ ಚರ್ಚೆಯನ್ನೂ ಮಾಡಿಲ್ಲದಿರುವುದು ನಿಜವೇ ?

ಇ) ಮುಂದಿನ ಏಳು ವರ್ಷಗಳಲ್ಲಿ (ಎಂಟನೆಯ ಯೋಜನೆ ಒಳಗೊಂಡಂತೆ) ವರ್ಷ ಕನಿಷ್ಠ ೧೦೦ ಕೋಟಿ ರೂಪಾಯಿ ಹೈದರಾಬಾದ್ ಕರ್ನಾಟಕದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಹಣ ಒದಗಿಸಲು ಕ್ರಮ ಕೈಗೊಳ್ಳುವಿರಾ ?

ಈ) ಸ್ವಾಯತ್ತ ಅಧಿಕಾರ ಹೊಂದಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ರಚಿಸುವ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು). —

ಅ) ನೆನಪಿದೆ.